ಕವಿತೆ

# ಧಾರವಾಡದಲಲ್ಲಲ್ಲಿ

**1**

ಕವಿತೆಗಳು ಬಂದು ಮುತ್ತಿಕೊಂಡವು ಕವಿಯನ್ನು
ಅವುಗಳಿಗೆ ಕವಿಯಾಗಬೇಕೆಂಬಾಸೆ!
ಮತ್ತೆ ಅವುಗಳ ಮೋರೆ ನಿರುಕಿಸುತ ಕವಿಗೆ
ಅದೇನೋ ಕೊರಗು ಹೊಗೆಯಾಡುತ್ತಿದೆ
ಕೈಗೂಡಿದಾಸೆ ಯಾವುದೂ ಬದುಕಲ್ಲಿ
ಹಾರೋ ಚಿಟ್ಟೆಯಾಗಿರದೆಂಬ ದುರಂತ
ನೆನೆದು ಕವಿ ಅನ್ನುವನು ಅವುಗಳಿಗೆ–ಕವಿತೆಗಳೇ
ಕವಿತೆಯಾಗುವುದೆ ಚಂದ ಕವಿಯಾಗುವುದಕಿಂತ!

**2**

ಹೂತ ಹುಣಿಸೆಯ ಮರಕ್ಕೊರಗಿ ನಿಂತಿರುವಾಗ
ತೇಲಿಬಂದಿತು ಆ ಗಾಳಿಮಾತು
ಹೌದೆನುವುದು ಅಲ್ಲ ಅಲ್ಲವೆನುವುದು ಹೌದು
ನೀ ಏನ ಹಿಡಿದಿ ಅದು ನಿನ್ನ ನೆರಳೇ ವಿನಾ ವಸ್ತುವಲ್ಲ
ಒಮ್ಮೆ ಹೊಯ್ದಾಡಿ ಹುಣಿಸೆಯ
ರೆಂಬೆ ಕೊಂಬೆ ಎಲೆ ಹೂವು
ಕಾಯ ಜೀವದ ಈ ಸಣ್ಣ ನೋವು
ಅಂದುಕೊಂಡದ್ದು ಬರೇ ಇರುವುದು ಬೇರೇ
ಆದರ ಮೇಲೇ ಮರ ನಿಂತಿರುವುದು

**3**

ಗಗನಕ್ಕೆ ಕೈನೆಗಹಿ
ಕವಿತೆಯೋದುವ ವರಸೆ
ಟೊಂಗೆಟೊಂಗೆಯ ಹುಣಿಸೆ
ನೀವಲ್ಲದಿನ್ನೇನು
ಹಳ್ಳದ ದಂಡ್ಯಾಗ ನೀವು ಮೊದಲಿಗೆ ಕಂಡ
ಏರೀಕಿ ನಗೆ
ಹಾದೀಲಿ ನಡೆವ ಬಾಲೆಯರ ಬಳಗದಲಿ
ಅಲೆಯಾಗಿ ಉರುಳುವುದ
ನೋಡೇ ನೋಡುತ್ತೀರಿ
ಗುಳ್ಳೆಯೊಡೆದರೂ ನೀರಾಗಿದ್ದೀರಿ
ಧಾರವಾಡದಲೆಲ್ಲೆಲ್ಲು ಇದುರಾಗಿ
ಬದುರಾಗಿ ದಿಗಿಲುಗೊಳಿಸುತ್ತೀರಿ
ಮೊಕಾಶಿ ಕೀರ್ತಿಯರ ಮೋರೆ ಮೇಲೆ
ಮತ್ತೀಗ ನನ್ನ ನೆತ್ತೀ ಮೇಲೆ
ಅತ್ತೀಯ ನೆರಳ್ಹಾಕಿ

● **ಜೀವಯಾನದ ಎಸ್. ಮಂಜುನಾಥ್**



ಎಸ್.ವಿ. ಹೂಗಾರ